ಮಾಡುವುದಕ್ಕೆ ಹೇಳಿದ್ದೇನೆ. ಟರ್ಮ್ ಡೇಸ್ ಪ್ರಾಬ್ಲಮ್ ಇದೆ. 16ರಿಂದ ಪರೀಕ್ಷೆ ಶುರುಮಾಡುತ್ತಿದ್ದಾರೆ. ಒಂದೂ ಪ್ರಾಕ್ಟಿಕಲ್ ಕ್ಲಾಸ್ ಆಗಿಲ್ಲ. ಚಿಕ್ಕನಾಯಕನಹಳ್ಳಿ ಕಾಲೇಜಿನ ವಿದ್ಯಾರ್ಥಿಗಳ ಗತಿಯೇನು?

ಅಧ್ಯಕ್ಷರು: ಈಗ ಕೊಶ್ಚನ್ ಅವರ್ ಈ ರೀತಿಯಾದರೆ ಡೆಡ್‌ಲಾಕ್ ಆಗುತ್ತದೆ.

ಶ್ರೀ ಜೆ.ಸಿ.ಬಾಧುಸ್ವಾಮಿ: ಅದನ್ನು ಎಕ್ಸಮ್ಪ್ ಮಾಡುವುದಕ್ಕೆ ಹೇಳಿ.

ಶ್ರೀ ಐ.ಎಂ.ಜಯರಾಮಶೆಟ್ಟಿ: ಬೈಂದೂರಿನ ಪದವಿಪೂರ್ವ ಕಾಲೇಜಿನಲ್ಲಿ 75 ಪರ್ಸೆಂಟ್ ಲೆಕ್ಚರರ್ಸ್ ಇಲ್ಲ. ನಾನು ಈ ಬಗ್ಗೆ 25 ಲೆಟರ್ ಹಾಕಿದ್ದೇನೆ. ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದಾರೆ. ಈ ರೀತಿಯಾದರೆ ಆ ಮಕ್ಕಳ ಭವಿಷ್ಯವೇನು?

ಅಧ್ಯಕ್ಷರು: ಮಾನ್ಯ ಗೋವಿಂದೇಗೌಡರೆ, ತಮ್ಮ ಅಧಿಕಾರಿಗಳನ್ನು ಕರೆದು ಎಲ್ಲೆಲ್ಲಿ ವೆಕೆನ್ಸೀಸ್ ಫಿಲಪ್ ಮಾಡಿಲ್ಲ ಅಲ್ಲಿ ಹೇಗೆ ಮಾಡಬೇಕೆನ್ನುವುದರ ಬಗ್ಗೆ ಆಲೋಚನೆ ಮಾಡಿ.

ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ ಕಟ್ಟಡ ಉದ್ಘಾಟನೆಯಾಗದೇ ಇರುವುದು.

19(77)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ ಆವರಣದಲ್ಲಿ ಪೂರ್ಣಗೊಂಡಿರುವ ಹೊಸ ಕಟ್ಟಡ ಉದ್ಘಾಟಿಸದೇ ಇರಲು ಕಾರಣವೇನು?

ಆ) ಈ ಆಸ್ಪತ್ರೆಯಲ್ಲಿ ಹಲವು ದರ್ಜೆಯ ಹುದ್ದೆಗಳು ಖಾಲಿ ಇದ್ದು ಭರ್ತಿ ಮಾಡದಿರಲು ಕಾರಣವೇನು?

ಇ) ಆಸ್ಪತ್ರೆಯ ಹೊಸ ಕಟ್ಟಡವನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಎಷ್ಟು ದಿನಗಳಲ್ಲಿ ಪ್ರಾರಂಭಿಸಲಾಗುವುದು?

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಕೆ.ಆರ್.ಆಸ್ಪತ್ರೆಯ ಆವರಣದಲ್ಲಿ ಕಟ್ಟಿರುವ ಹೊರ:ಒಳ ರೋಗಿಗಳ ನೂತನ ಕಟ್ಟಡದಲ್ಲಿ ವೈದ್ಯಕೀಯ ವಿಭಾಗವನ್ನು ಸ್ಥಳಾಂತರಿಸಿದ್ದು, ಸಾರ್ವಜನಿಕರ ಉಪಯೋಗಕ್ಕೆ ಬಳಸಲಾಗುತ್ತಿದೆ. ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಬೇಕಾಗುವ ಅಗತ್ಯ ಸಲಕರಣೆಗಳು, ಉಪಕರಣಗಳು, ಶೇ.80ರಷ್ಟು ಸರಬರಾಜಾಗಿರುತ್ತದೆ. ಉಳಿದ ಉಪಕರಣಗಳಾದ

ಓ.ಟಿ. ಟೇಬಲ್ಸ್, ಬಾಯಲ್ಸ್, ಆಪರೇಟಸ್ ಹಾಗೂ ಶ್ಯಾಡೋಲೆಸ್ ಲ್ಯಾಂಪ್‌ಗಳನ್ನು ಸರಬರಾಜು ಮಾಡಲು ಕ್ರಮ ತೆಗೆದುಕೊಂಡಿದ್ದು, ಪೂರೈಕೆಯಾದ ಕೂಡಲೇ ಶಸ್ತ್ರ ಚಿಕಿತ್ಸಾ ವಿಭಾಗವನ್ನು ಸ್ಥಳಾಂತರಿಸಿ ಕಟ್ಟಡವನ್ನು ಉದ್ಘಾಟಿಸಲಾಗುವುದು.

ಆ) ಖಾಲಿ ಇದ್ದ ಕೆಲವು ಹುದ್ದೆಗಳನ್ನು ಈಗಾಗಲೇ ತುಂಬಲಾಗಿದೆ. ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ವಿವಿಧ ಹಂತದಲ್ಲಿ ಕ್ರಮ ಜರುಗಿಸಲಾಗುತ್ತಿದೆ.

ಇ) ಈಗಾಗಲೇ ಈ ಕಟ್ಟಡವನ್ನು ವೈದ್ಯಕೀಯ ವಿಭಾಗಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕರಿಗಾಗಿ ಉಪಯೋಗಿಸಲಾಗುತ್ತಿದೆ.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರವನ್ನು ಓದಿದಾಗ, ನಮ್ಮ ಮೈಸೂರು ನಗರದಲ್ಲಿನ ಕೆ.ಆರ್.ಆಸ್ಪತ್ರೆ ಒಂದು ನರಕಸದೃಶ. ನಮ್ಮ ಆರೋಗ್ಯ ಸಚಿವರು, ಮಾನ್ಯ ಉಪ ಮುಖ್ಯಮಂತ್ರಿಗಳು ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ಎಲ್ಲರೂ ಅಲ್ಲಿಗೆ ಭೇಟಿ ಮಾಡಿದ್ದಾರೆ. ಅಲ್ಲಿರುವ ಆಸ್ಪತ್ರೆಯ ವ್ಯವಸ್ಥೆಯನ್ನು ನೋಡಿದರೆ ರೋಗಿಗಳು ಆಸ್ಪತ್ರೆ ಒಳಗೆ ಹೋಗಿ ರೋಗ ವಾಸಿ ಮಾಡಿಕೊಂಡು ವಾಪಸ್ಸು ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿಗೆ ಹೋದರೆ ರೋಗ ಅಂಟಿಸಿಕೊಂಡು ಬರಬೇಕಾಗುತ್ತದೆ. ಅಲ್ಲಿಗೆ ರೋಗಿಗಳಾಗಿ ಹೋದರೆ ಅಲ್ಲಿ ಅವರಿಗೆ ಹಾಸಿಗೆ ಸಿಗುವುದಿಲ್ಲ. ಆಸ್ಪತ್ರೆಯ ಕಾರಿಡಾರ್‌ನಲ್ಲಿ ಮಲಗಿಸುತ್ತಾರೆ ಈ ರೀತಿಯಾದ ಸ್ಥಿತಿಯನ್ನು ನಾವು ಅಲ್ಲಿ ಕಾಣುತ್ತಿದ್ದೇವೆ. ಹೊಸ ಕಟ್ಟಡದಲ್ಲಿ ಆಸ್ಪತ್ರೆ ಪ್ರಾರಂಭ ಮಾಡಿದ್ದಾರೆ, ಅಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದಾರೆ ನಾನು ಒಪ್ಪಿಕೊಳ್ಳುತ್ತೇನೆ. ಆ ಕಟ್ಟಡದಲ್ಲಿ ಎಷ್ಟು ವಾರ್ಡ್‌ಗಳನ್ನು ಪ್ರಾರಂಭ ಮಾಡಿದ್ದೀರಿ ಇನ್ನು ಎಷ್ಟು ವಾರ್ಡ್‌ಗಳು ಪ್ರಾರಂಭವಾಗಬೇಕಾಗಿದೆ, ಈಗಾಗಲೇ ಕೋಟ್ಯಾಂತರ ರೂಪಾಯಿ ಆಪರೇಷನ್ ಮಾಡುವ ಸಲಕರಣೆಗಳು ಬಂದಿವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆಯಲ್ಲಿ ಉಪ ಪ್ರಶ್ನೆಗಳನ್ನು ಕೇಳಬೇಕು.

ಶ್ರೀ ಇ.ಮಾರುತಿರಾವ್‌ಪವಾರ್: ಆಸ್ಪತ್ರೆಯಲ್ಲಿ ಡಾಕ್ಟರ್ ಮತ್ತು ನರ್ಸ್‌ಗಳು ಬಂದು ನೋಡುವ ವ್ಯವಸ್ಥೆ ಇಲ್ಲ. ಇಡೀ ಜಿಲ್ಲೆಯಲ್ಲಿ ಎಲ್ಲಾ ಕಡೆಯಿಂದ ಆಸ್ಪತ್ರೆಗೆ ಜನರು ಬರುತ್ತಾರೆ. ಬಹಳ ಪ್ರಮುಖವಾದ ಜವಾಬ್ದಾರಿ ಇದೆ.

ಅಧ್ಯಕ್ಷರು: ಮಾನ್ಯಸದಸ್ಯರು ಉಪ ಪ್ರಶ್ನೆ ಕೇಳಬೇಕು, ಚೂಟಿಯಾಗಿರಬೇಕು. ನಿಮ್ಮನ್ನೆಲ್ಲಾ ಮೇಲಕ್ಕೆ ಕಳುಹಿಸಬೇಕೆಂದು ಇದ್ದೇವೆ.

11.40 ಪಿ.ಎಂ

ಡಾ॥ ಎಂ.ಶಂಕರನಾಯಕ್: ತಾವು ಹೇಳುವಂಥ ಪರಿಸ್ಥಿತಿ ಐದಾರು ವರ್ಷಗಳ ಹಿಂದೆ

ಇದ್ದಿರಬಹುದು. ಈಗ ಸಾಕಷ್ಟು ಸುಧಾರಣೆಯಾಗಿದೆ. ನಾನು ಅನೇಕ ಜನ ಶಾಸಕ ಮಿತ್ರರು ಮಾನ್ಯ ಉಪಮುಖ್ಯಮಂತ್ರಿಗಳನ್ನು ಕರೆದುಕೊಂಡುಹೋಗಿ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದೇನೆ. ಅವರು ಹೇಳುವಂಥ ಪರಿಸ್ಥಿತಿ ಅಲ್ಲಿ ಇಲ್ಲ. ಸಾಕಷ್ಟು ಸುಧಾರಣೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್: ತಾವು ಒಂದು ಸಾರಿ ಹೋಗಿಬನ್ನಿ. ಅಲ್ಲಿಹೋಗಿ ಒಂದು ನಿಮಿಷ ಮೂತ್ರ ವಿಸರ್ಜನೆ ಮಾಡಿ ಬಂದರೆ ಒಂದು ಸಾವಿರ ಅಭಿನಂದನೆಗಳನ್ನು ನಾನು ತಮಗೆ ಸಲ್ಲಿಸುತ್ತೇನೆ. ಒಳಗೆ ಹೋದರೆ ಹೊರಗಡೆ ಬರುವ ಹಾಗೇ ಇಲ್ಲ. ತಾವು ಅಲ್ಲಿ ಹೋಗಿಯೇ ಇಲ್ಲ. ಯಾವ್ಯಾವುದೋ ಆಸ್ಪತ್ರೆಯನ್ನು ನೋಡಿಕೊಂಡು ಬಂದಿದ್ದೀರಿ. ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಹೋಗಿ ಬನ್ನಿ. ಅದನ್ನು ಮನುಷ್ಯರ ಆಸ್ಪತ್ರೆಯನ್ನಾದರೂ ಮಾಡಿ, ಇಲ್ಲ ದನಗಳ ಆಸ್ಪತ್ರೆಯನ್ನಾದರೂ ಮಾಡಿ. ಮನುಷ್ಯರ ಆಸ್ಪತ್ರೆ ಮಾಡಬೇಕೆಂದರೆ ಈ ವ್ಯವಸ್ಥೆಗಳನ್ನು ಮಾಡಿ. ಇಲ್ಲ, ದನಗಳ ಆಸ್ಪತ್ರೆ ಮಾಡಬೇಕು ಎಂದರೆ ಬದಲಾವಣೆಗಳನ್ನು ಮಾಡಿ.

ಶ್ರೀ ಎಂ.ಶ್ರೀನಿವಾಸ್: ಈ ಆಸ್ಪತ್ರೆಗಳ ಬಗ್ಗೆ ಮಾತನಾಡಬೇಕಾದರೆ,...

(ಗೊಂದಲ)

ಅಧ್ಯಕ್ಷರು: ಹತ್ತು ದಿವಸಗಳಲ್ಲಿ ಅವರು ಹೊರಟುಹೋಗುತ್ತಾರೆ. ಪ್ಲಾಪ, ಮಾತನಾಡಲಿ.

ಶ್ರೀ ಎಂ.ಶ್ರೀನಿವಾಸ್: ಈ ಆಸ್ಪತ್ರೆಗಳ ಬಗ್ಗೆ ಹೇಳಬೇಕಾದರೆ ಚನ್ನಪಟ್ಟಣದಲ್ಲಿ ಒಂದು ಟೆಂಪೋ ನೀರಿನೊಳಗೆ ಬಿದ್ದು ಸುಮಾರು ಏಳು ಜನ ಸತ್ತುಹೋದರು. ನಾನು ಅಲ್ಲಿಂದ ಆಸ್ಪತ್ರೆಗೆ ಹೋದರೆ ಅಲ್ಲಿ ಡಾಕ್ಟರ್‌ಗಳೇ ಇರಲಿಲ್ಲ. ಆಮೇಲೆ ಖಾಸಗಿ ವೈದ್ಯರನ್ನು ಕರೆದುಕೊಂಡುಹೋಗಿ ಟ್ರೀಟ್‌ಮೆಂಟ್ ಕೊಡಿಸಿದೆವು. ಅಲ್ಲಿ ತಲೆದಿಂಬಿಲ್ಲ, ಹಾಸಿಗೆಯಿಲ್ಲ. ರೋಗಿಗಳನ್ನು ಕೆಳಗಡೆ ಮಲಗಿಸುತ್ತಾರೆ. ಅದನ್ನು ಅಧ್ಯಕ್ಷರ ಮುಖಾಂತರ ತಮಗೆ ಜ್ಞಾಪಕಕ್ಕೆ ತರುತ್ತಿದ್ದೇನೆ. ಅಲ್ಲಿ ತಾವು ಹೋಗಿ ನೋಡಿಕೊಂಡು ಬನ್ನಿ.

ಅಧ್ಯಕ್ಷರು: ಇದನ್ನು ತಾವು ಲೋಕಸಭೆಯಲ್ಲೂ ಹೇಳಿ, ಬಿಡಬೇಡಿ.

ಶ್ರೀ ಎಂ.ಶ್ರೀನಿವಾಸ್: ಇಲ್ಲಿ ಆಗಿರುವುದನ್ನು ಇಲ್ಲಿ ಹೇಳುತ್ತೇನೆ. ಅಲ್ಲಿ ಆಗಿರುವುದನ್ನು ಅಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ಶಂಕರಲಿಂಗೇಗೌಡರು, ಪವಾರ್‌ರವರೇ, ಗೌಡರು ಮಾತನಾಡಲಿ.

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ: ಕೀವುರಕ್ತ ಬರುತ್ತಿರುವ ರೋಗಿಗಳನ್ನು

ಹೊರಗಡೆಯೇ ಮಲಗಿಸುತ್ತಾರೆ. ಅದು ಅಂತಹ ಹೀನಾಯ ಸ್ಥಿತಿಯಲ್ಲಿದೆ. ಮೈಸೂರು ನಗರ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇವತ್ತು ಅಲ್ಲಿಯ ಕೃಷ್ಣರಾಜೇಂದ್ರ ಆಸ್ಪತ್ರೆ ಮೈಸೂರು ದೊರೆಗಳಿಂದ ಕೊಡುಗೆಯಾಗಿ ಬಂದಿರುವಂಥಾದ್ದು. ಗಂಗಾರಾವ್ ಕಟ್ಟಡದಂತೆ ಶಿಥಿಲವಾಗಿದ್ದ ಕಟ್ಟಡವನ್ನು ಹೇಗೋ ಪ್ಯಾಚ್‌ಅಪ್ ಮಾಡಿ ರೋಗಿಗಳನ್ನು ತಂದು ಅಲ್ಲಿ ಸೇರಿಸಿದರು. ರೋಗಿಗಳು ಅಲ್ಲಿ ಬಹಳ ಕಷ್ಟಪಡುತ್ತಿದ್ದರು. ಆ ಕ್ಷೇತ್ರದ ಶಾಸಕರಾಗಿ ನನ್ನ ಗಮನಕ್ಕೆ ಬರಲಿಲ್ಲ. ನಮ್ಮನ್ನು ಕೇಳುವ ಸೌಜನ್ಯವನ್ನೂ ಕೂಡ ತೋರಿಸಲಿಲ್ಲ. ಅಧ್ಯಕ್ಷರೇ, ಇದು ಬಹಳ ಮನಸ್ಸಿಗೆ ನೋವಾಗುತ್ತದೆ.

ಅಧ್ಯಕ್ಷರು: ರಾಮದಾಸ್, ಶಂಕರಲಿಂಗೇಗೌಡರು ಏನು ಹೇಳಿದ್ದುದು?

(ನಗು)

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ: ಕೆ.ಆರ್.ಆಸ್ಪತ್ರೆಯ ಕರ್ಮಕಾಂಡ ಈ ರೀತಿ ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ನನಗೆ ನಿಧಾನವಾಗಿ ಮಾತನಾಡುವುದಕ್ಕೆ ಬರುವುದಿಲ್ಲ. ಏನು ಮಾಡಬೇಕೆಂದು ಅರ್ಥವಾಗುತ್ತಿಲ್ಲ. ಪಾಠವನ್ನು ಇವರೇ ಕಲಿಸಿಕೊಡಬೇಕು.

ಅಧ್ಯಕ್ಷರು: ನನಗೆ ನಿಮ್ಮಷ್ಟು ಚೈತನ್ಯ ಇದ್ದಿದ್ದರೆ ಪರವಾಗಿರಲಿಲ್ಲ. ನಾನು ಸ್ವಲ್ಪ ನಿಧಾನ. ನಿಧಾನವಾಗಿ ನೀವು ಹೇಳಬೇಕು.

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ: ಮೈಸೂರು ಜಿಲ್ಲೆಗೆ ನಾಲ್ಕು ಜನ ಉಸ್ತುವಾರಿ ಮಂತ್ರಿಗಳು ಇದ್ದಾರೆ. ಹದಿನಾರು ಜನ ಶಾಸಕರುಗಳು ಇದ್ದಾರೆ. ಎಲ್ಲ ಕಡೆಯಿಂದ ಕೂಡ ಜನ ಕೆ.ಆರ್.ಆಸ್ಪತ್ರೆಗೆ ಹೋಗುತ್ತಾರೆ. ಅಲ್ಲಿಯ ಡಾಕ್ಟರ್‌ಗಳು ದನ ಕೊಯ್ಯುವುದಕ್ಕೂ ಲಾಯಕ್ಕಿಲ್ಲ. ಅಂತಹ ಡಾಕ್ಟರ್‌ಗಳು ಅವರಿಗೆ ಪ್ರೈವೇಟ್ ಆಗಿ ಪ್ರಾಕ್ಟೀಸ್ ಮಾಡಬೇಕು. ಇಲ್ಲಿ ಬಂದುಬಿಟ್ಟು ನಾಮಕಾವಸ್ಥೆಗೆ ಸಹಿ ಮಾಡಿಬಿಟ್ಟು ಹೊರಗಡೆಗೆ ಹೋಗುತ್ತಾರೆ. ಎರಡನೇ ಪ್ರಶ್ನೆ ಎಂದರೆ ಅಲ್ಲಿಯ ಆಸ್ಪತ್ರೆಯ ಶುಚಿತ್ವವನ್ನು ನೋಡಿದರೆ, ಅದು ಶುಚಿತ್ವವೋ ಅಶುಚಿತ್ವವೋ ಏನೋ ಗೊತ್ತಿಲ್ಲ. ಅಲ್ಲಿಯ ಪರಿಸ್ಥಿತಿಯನ್ನು ಹೇಳುವುದಕ್ಕೆ ಆಗುವುದಿಲ್ಲ. ವಾಸನೆ ಮೂಗಿಗೇ ಬಂದು ಬಡಿಯುತ್ತದೆ. ಅಂತಹ ಪರಿಸ್ಥಿತಿ ಅಲ್ಲಿದೆ. ಗಂಗಾರಾಮ್ ಕಟ್ಟಡ ತರಹ ಅದೊಂದು ಸ್ಲೆಟನ್ ತರಹ ಇತ್ತು. ಅದು ಗ್ಯಾರಂಟಿಯಾಗಿ ಇನ್ನು ಹತ್ತು ವರ್ಷಗಳಲ್ಲಿ ಬಿದ್ದುಹೋಗುತ್ತದೆ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ದುರ್ವ್ಯಯ ಮಾಡಿದ್ದಾರೆ. ಇನ್ನೂ ಕೂಡ ಆಪರೇಶನ್ ಥಿಯೇಟರ್ ಓಪನ್ ಆಗಿಲ್ಲ. ಇದಕ್ಕೆ ಕಾರಣಕರ್ತರು ಯಾರು? ನಮ್ಮ ಉಪಮುಖ್ಯಮಂತ್ರಿಗಳು ಇದ್ದಾರೆ, ಮಹದೇವಪ್ಪನವರು ಇದ್ದಾರೆ. ಇವರಿಬ್ಬರೂ ಕೂಡ ಮೈಸೂರು ನಗರದ ಕಡೆಗೆ ಗಮನ ಹರಿಸಿದ್ದಾರಾ?

ಅಧ್ಯಕ್ಷರು: ಅವರು ಉತ್ತರ ಕೊಡುತ್ತಾರೆ ಇರಿ. ಈಗ ದನದ ಬಗ್ಗೆ ಎಲ್ಲ ವೆಟರ್ನರಿ ಮಿನಿಸ್ಟರ್, ಲಿಂಗಯ್ಯನವರು ಬಂದು ಹೇಳುತ್ತಾರೆ. ಜನಕ್ಕೆ ಸಂಬಂಧಪಟ್ಟಿದ್ದು ನೀವು ಹೇಳಿಬಿಡಿ.

ಡಾ॥ ಎಂ.ಶಂಕರ್‌ನಾಯಕ್: ಅವರು ಹೇಳಿರತಕ್ಕಂಥ ಪರಿಸ್ಥಿತಿ ಆ ಆಸ್ಪತ್ರೆಯಲ್ಲಿ ಇಲ್ಲ. ಸುಧಾರಣೆಯಾಗಿದೆ ಎಂದು ನಾನು ಭಾವಿಸುತ್ತೇನೆ.

(ಗೊಂದಲ)

ಶ್ರೀ ಇ.ಮಾರುತಿರಾವ್ ಪವಾರ್: ಖಂಡಿತ ಸುಧಾರಣೆಯಾಗಿಲ್ಲ.

ಡಾ॥ ಎಂ.ಶಂಕರ್‌ನಾಯಕ್: ಸ್ವಲ್ಪ ಕೇಳಿ. ನಾನು ಅನೇಕ ಸಲ ಭೇಟಿ ಕೊಟ್ಟಿರುವುದರ ಜೊತೆಗೆ ಉಪಮುಖ್ಯಮಂತ್ರಿಗಳನ್ನು, ಆರೋಗ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ ಸಹ ಭೇಟಿ ನೀಡಿದ್ದೇನೆ. ಅವರು ಹೇಳಿರತಕ್ಕಂಥ ಹಳೆಯ ಕಟ್ಟಡದಲ್ಲಿ ಅನೇಕ ಬಾತ್‌ರೂಮುಗಳು ಬಹಳಷ್ಟು ಕೆಟ್ಟಿದ್ದವು. ಈಗೆಲ್ಲಾ ರಿನೋವೇಶನ್ ಆಗಿದೆ. ಮತ್ತೆ ಹೊಸ ಕಟ್ಟಡದಲ್ಲಿ ಈಗಾಗಲೇ ಹೇಳಿರುವಂತೆ, ಹತ್ತಾರು ವರ್ಷಗಳ ಹಿಂದೆ ಶಂಕುಸ್ಥಾಪನೆಯಾಗಿ ಅದು ಹಾಗೆಯೇ ಇದ್ದು, ಈಗ ಕಾಮಗಾರಿಕೆ ಕೆಲಸ ಮುಗಿದಿದೆ. ಹೋದವರ್ಷ ಅದು ಮುಗಿದಮೇಲೆ ಹಳೆಯ ಕಟ್ಟಡದಲ್ಲಿ ಸ್ಥಳಾವಕಾಶ ಇಲ್ಲ ಎಂದು ಹೇಳಿ ಕಟ್ಟಡದಲ್ಲಿ ಹೊರರೋಗಿ ಮತ್ತು ಒಳರೋಗಿಗಳನ್ನು ನೋಡುವ ಕೆಲಸವನ್ನು ಈಗಾಗಲೇ ನಾವು ಪ್ರಾರಂಭ ಮಾಡಿದ್ದೇವೆ. ಅಲ್ಲಿ Medical Intensive care unit ಮತ್ತು thread-mill unit ಇದೆ ಮತ್ತು ಹೊರರೋಗಿಗಳು, ಹಾಗೂ ಮೆಡಿಕಲ್ ವಾರ್ಡ್‌ಗಳು ಒಂದು, ಎರಡು ಮತ್ತು ಮೂರನೇ ಫ್ಲೋರ್‌ನಲ್ಲಿವೆ. ಸ್ವಲ್ಪ ನಾನು ಹೇಳಿದ್ದನ್ನು ಕೇಳಿ ಆಮೇಲೆ ಹೇಳಿ.

(ಗೊಂದಲ)

ಶ್ರೀ ಹೆಚ್.ಎನ್.ಶಂಕರ್‌ಲಿಂಗೇಗೌಡ: ಕಳೆದವಾರ ನಾನು ಕೂಡ ಹೋಗಿ ನೋಡಿದ್ದೇನೆ. ಅವರು ಹೇಳುತ್ತಿರತಕ್ಕಂಥ ಮಾತು ಸತ್ಯಕ್ಕೆ ದೂರವಾದದ್ದು. ಅಲ್ಲಿ ಡಾಕ್ಟರ್‌ಗಳು ಇಲ್ಲ. ಕೆಲವರು ಇದ್ದರೂ ಕೂಡ ಅವರು ಯಾವುದಕ್ಕೂ ಲಾಯಕ್ಕಿಲ್ಲ.

ಶ್ರೀ ಇ.ಮಾರುತಿರಾವ್ ಪವಾರ್: ದುಡ್ಡು ಕೊಡದಿದ್ದರೆ ಟ್ರೀಟ್‌ಮೆಂಟನ್ನೇ ಕೊಡುವುದಿಲ್ಲ. ರೋಗಿಗಳು ಈಚೇನೆ ಬಿದ್ದಿರುತ್ತಾರೆ. ಹಣ ಕೊಟ್ಟರೇನೆ ಅಲ್ಲಿ ರೋಗಿಗಳನ್ನು ನೋಡುತ್ತಾರೆ. ಆ ಪರಿಸ್ಥಿತಿ ಅಲ್ಲಿದೆ.

ಶ್ರೀ ವಾಟಾಳ್ ನಾಗರಾಜ್: ರಾತ್ರಿ ಏನಾದರೂ ಹನ್ನೆರಡು ಗಂಟೆಗೆ ಹೋದರೆ ಡಾಕ್ಟರ್‌ಗಳು ಇರುವುದಿಲ್ಲ. ಯಾರು ಕೇಳುವವರು ಇಲ್ಲ. ಆ ಪರಿಸ್ಥಿತಿ

ನಿರ್ಮಾಣವಾಗಿದೆ. ಅನಾಥ ಶವವನ್ನು ಕೊಯ್ಯುವ ಮನೆ ಇದ್ದಹಾಗೆ ಅದು ಇದೆ. ಕೃಷ್ಣರಾಜೇಂದ್ರ ಆಸ್ಪತ್ರೆ ಹೆಣ ಕೊಯ್ಯುವ ಮನೆ ಇದ್ದಹಾಗೆ ಇದೆ.

ಅಧ್ಯಕ್ಷರು: ಒಂದು ನಿಮಿಷ, ದಯಮಾಡಿ ಸಹಕರಿಸಿ. ಪವಾರ್ ಅವರು ಹೇಳಲಿ.

ಡಾ॥ ಎಂ.ಶಂಕರ್‌ನಾಯಕ್: ಉತ್ತರ ಪೂರ್ತಿ ಮುಗಿದಮೇಲೆ ಅವರು ಏನಾದರೂ ಕೇಳುವುದಿದ್ದರೆ ಕೇಳಲಿ. ನಾನು ಏನು ಹೇಳುತ್ತಾ ಇದ್ದೇನೆ ಎಂದರೆ, ಹೋದವರ್ಷ ಹೊಸ ಕಟ್ಟಡದಲ್ಲಿ ಕೆಲಸ ಪ್ರಾರಂಭ ಮಾಡಲು ಶುರು ಮಾಡಿದೆ. ಏನು ನೆಲ ಅಂತಸ್ತಿನಲ್ಲಿ ಹೊರರೋಗಿಯ ವಿಭಾಗದ ಕೆಲಸ ಇತ್ತು, ಮತ್ತು ಮೆಡಿಕಲ್ ವಾರ್ಡ್, ಐ.ಸಿ.ಸಿ.ಯು.ವಾರ್ಡ್, Surgical block ಎಂದು ಏನಿದೆ ಅದು ಸೆಕೆಂಡ್ ಫ್ಲೋರ್‌ನಲ್ಲಿ ಕೆಲಸ ಮಾಡುತ್ತಿದೆ. ಇನ್ನು ಸರ್ಜಿಕಲ್ ಬ್ಲಾಕ್ ಮಾತ್ರ ಕೆಲಸ ಮಾಡಬೇಕಾಗಿದೆ. ಕಾರಣ, ಅದರಲ್ಲಿ ಎಕ್ವಿಪ್‌ಮೆಂಟ್ಸ್ ಇರಲಿಲ್ಲ. ಈ ವರ್ಷ ಅದಕ್ಕೆ ನಾವು ಹಣವನ್ನು ಒದಗಿಸಿಬಿಟ್ಟು ಈಗೆಲ್ಲ ಟೆಂಡರ್ ಕರೆದು ಏನು ಉಪಕರಣಗಳು ಬಂದಿದ್ದಾವೆ, ಸರ್ಜಿಕಲ್ ಬ್ಲಾಕ್‌ನ್ನು ಈ ವರ್ಷ ಪ್ರಾರಂಭ ಮಾಡುತ್ತಿದ್ದೇವೆ. ಇವರು ಏನು ಹೇಳುತ್ತಿದ್ದಾರೆ, ಹಳೆಯ ಕಟ್ಟಡದಲ್ಲಿ ವಾಸನೆ ಬರುತ್ತಿದೆ, ಬಾತ್‌ರೂಮುಗಳು ಸರಿಯಿಲ್ಲ, ಎಂದು ಇಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಅದಾದನಂತರ ಸಾಕಷ್ಟು ಹಣವನ್ನು ಪ್ರೊವಾಯ್ಡ್ ಮಾಡಿ ಹಳೆಯ ಬಾತ್‌ರೂಮುಗಳನ್ನು ಈಗ ರಿನೋವೇಟ್ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ತಾವೇನಾದರೂ ಮೈಸೂರಿಗೆ ಹೋಗುವಂಥ ಸಂದರ್ಭದಲ್ಲಿ ನಾನೂ ತಮ್ಮ ಜೊತೆಗೆ ಬರುತ್ತೇನೆ. ಹಿಂದಿದ್ದ ವ್ಯವಸ್ಥೆಯನ್ನು ಮತ್ತು ಈಗಿನ ವ್ಯವಸ್ಥೆಯನ್ನು ತಾವು ಕಣ್ಣಾರೆ ನೋಡಿ. ಇವರು ಹೇಳುತ್ತಿರತಕ್ಕಂಥ ವಾಸ್ತವಾಂಶ ಇದ್ದರೆ ಮತ್ತು ತಾವು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಖಂಡಿತ ಹೋಗಬೇಡಿ. ಅವರ ಮಾತನ್ನು ನಂಬಿ ಹೋಗಬೇಡಿ. ಬರೇ ಕೃಷ್ಣರಾಜೇಂದ್ರ ಆಸ್ಪತ್ರೆ ಒಂದೇ ಅಲ್ಲ, ಇಡೀ ಸರ್ಕಾರಿ ಆಸ್ಪತ್ರೆಗಳ ಹಣೆಯಬರಹವೇ ಇಷ್ಟಾಗಿದೆ. ತಾವು ದಯವಿಟ್ಟು ಇದರ ಬಗ್ಗೆ ಸಮಗ್ರವಾಗಿ ಚಿಂತನೆಯನ್ನು ಮಾಡಬೇಕಾಗಿದೆ.

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ: ಗೊತ್ತಿಲ್ಲದಹಾಗೆ, ಪೂರ್ವಭಾವಿಯಾಗಿ ಯಾರಿಗೂ ಸೂಚನೆ ಕೊಡದೇನೆ ದಿಢೀರ್ ಆಗಿ ಹೋಗಿ.

ಶ್ರೀ ಇ.ಮಾರುತಿರಾವ್ ಪವಾರ್: ನಾವು ಕರೆದುಕೊಂಡು ಹೋಗಿ ತೋರಿಸುತ್ತೇವೆ. ಅಲ್ಲಿ ಬಹಳ ಅವ್ಯವಸ್ಥೆ ಇದೆ. ಒಂದು ದಿವಸ ಫಿಕ್ಸ್ ಮಾಡಿಕೊಂಡು ಸಚಿವರು ನಮ್ಮ ಜೊತೆಯಲ್ಲೇ ಬರಲಿ.

ಶ್ರೀ ಎ.ರಾಮದಾಸ್: ಸನ್ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಒಂದೇ ಒಂದು ಮಾತು.

ಕಳೆದರ್ಷ ಇದೇ ಸಮಯದಲ್ಲಿ, ಇದೇ ಸೆಶನ್‌ನಲ್ಲಿ ಆದಂಥ ಚರ್ಚೆ ಸಮಯದಲ್ಲಿ ತಾವೇ ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ಕೋಟ್ಯಾಂತರ ರೂಪಾಯಿ ಹಣ ಖರ್ಚುಮಾಡಿರುವಂಥ ಆಸ್ಪತ್ರೆಯಲ್ಲಿ, ತಕ್ಷಣದಲ್ಲಿಯೇ ಒಂದು ಆಕ್ಸಿಡೆಂಟ್ ಆಸ್ಪತ್ರೆಯನ್ನು ನರರೋಗಿಗಳದ್ದು ಅಲ್ಲಿ ಮಾಡಬೇಕು, ಎಂದು ಹೇಳಿದ್ದೆವು. ಆ ಕಟ್ಟಡ ಇವತ್ತಿನವರೆಗೂ ಹಾಗೇ ಉಳಿದಿದೆಯೆನ್ನುವಂಥ ಪ್ರಶ್ನೆ ಇಲ್ಲಿ ಬಂದಿದೆ ಅಷ್ಟೆ. ಒಂದು ವರ್ಷ ಆಯಿತು ಅವರು ಪ್ರಾಮಿಸ್ ಮಾಡಿ, ಇದೇ ಹೌಸ್‌ನಲ್ಲಿ. ಇವತ್ತಿನವರೆಗೂ ಅಲ್ಲಿ ಏನೂ ಕೆಲಸ ಆಗಿಲ್ಲ ಎನ್ನುವ ಮಾತನ್ನು ಮಾತ್ರ ನಾವು ಇಲ್ಲಿ ಕೇಳುತ್ತಿದ್ದೇವೆ, ಮಾನ್ಯ ಅಧ್ಯಕ್ಷರೇ, ತಮ್ಮಿಂದಲೇ ಒಂದು ಸೂಚನೆ ಹೋಗಿತ್ತು.

ಅಧ್ಯಕ್ಷರು: ಆಯಿತು. ಮುಂದಿನ ಪ್ರಶ್ನೆ ಮಾನ್ಯ ಕುಮಾರ್ ಬಂಗಾರಪ್ಪನವರು

ಶ್ರೀ ಕೆ.ಎಸ್.ಈಶ್ವರಪ್ಪ: ಕಳೆದಬಾರಿ ಪ್ರಾಮಿಸ್ ಮಾಡಿದ್ದುದು ಆಗಿಲ್ಲವೆಂದರೆ ಏನು ಮಾಡಬೇಕು ಹೇಳಿ. ಶಿವಮೊಗ್ಗದಲ್ಲಿ ಕೂಡ ಅದೇ ಪ್ರಕಾರವಾಗಿ ಆಗಿದೆ. ಇಡೀ ಬಿಲ್ಡಿಂಗ್ ರೆಡಿ ಇದೆ. ಉದ್ಘಾಟನೆ ಆಗಿಲ್ಲ. ಇದು ಯಾಕೆ ಎಂದು ಅರ್ಥವಾಗುವುದಿಲ್ಲ.

ಅಧ್ಯಕ್ಷರು: ಒಂದು ಕೆಲಸ ಮಾಡಿ. ಪ್ರೊಸೀಡಿಂಗ್ಸ್ ತೆಗೆದುಕೊಳ್ಳಿ, ಏನೇನು ನಡೆದಿದೆ ಎಂದು ನೋಡಿ. ವಾಸ್ತವಾಂಶವನ್ನು ನೋಡಿಕೊಳ್ಳಿ, ಆಕ್ಷನ್ ತೆಗೆದುಕೊಳ್ಳಿ, ರೂಲ್ಸ್ ಓದಿ, ಅದಕ್ಕೆ ಅವಕಾಶ ಇದೆ. ನನ್ನ ಮಾತನ್ನು ಕೇಳಿ. Initiate action against the Minister. ಸಿಕ್ಕಿಹಾಕಿಸಿ ಮಂತ್ರಿಗಳನ್ನು ಅವರು ಹೇಳಿದ ಹಾಗೆ ನಡೆದುಕೊಂಡಿಲ್ಲ ಎಂದರೆ, ಪ್ರಾಮಿಸ್ ಮಾಡಿದ್ದರು ಎಂದರೆ ನಮ್ಮ ನಿಯಮಾವಳಿಯಲ್ಲಿ ಅವಕಾಶ ಇದೆ. ಕ್ರಮ ಜರುಗಿಸಿ, ಅಷ್ಟೆ.

(ಗೊಂದಲ)

ಈಗ ಕುಮಾರ ಬಂಗಾರಪ್ಪನವರು ನಿಂತಿದ್ದಾರೆ ನೋಡಿ.

ಶ್ರೀ ಹೆಚ್.ಶಂಕರಲಿಂಗೇಗೌಡ: ಹಕ್ಕುಚ್ಯುತಿಗೆ ಹಾಕುತ್ತೇನೆ ಈಗ.

ಶ್ರೀ ಕೆ.ಎನ್.ಈಶ್ವರಪ್ಪ: ಸಾರ್, ಒಂದು ಮಾಡಬಹುದು. ಇವರು ಆಶ್ವಾಸನೆ ಕೊಟ್ಟಿರುವುದರ ಬಗ್ಗೆ ನಾವು ಕಾನೂನು ಪ್ರಕಾರ ಹೋಗುವುದು ಬೇಡ. ಯಾರ್ಯಾರು ಆಶ್ವಾಸನೆಗಳನ್ನು ಕೊಟ್ಟಿದ್ದಾರಲ್ಲಾ, ಈ ಮಂತ್ರಿಗಳನ್ನೆಲ್ಲಾ ಒಂದು ಸಾರಿ ಈ ಕೃಷ್ಣ ರಾಜೇಂದ್ರ ಆಸ್ಪತ್ರೆಗೆ ಕಳುಹಿಸಿಬಿಡಿ, ಸಾಕು.

ಸೊರಬದ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ವೈದ್ಯರು ಹಾಗೂ ಸಿಬ್ಬಂದಿಗಳ ಹುದ್ದೆ